ಕುಡಿಯುವ ನೀರು ಒದಗಿಸಲಾಗಿದೆ, ನೀರು ಸಿಗದ ಪ್ರದೇಶಗಳನ್ನೂ ಸರ್ಕಾರ ಗಮನದಲ್ಲಿಟ್ಟುಕೊಂಡು ಮಾಡುತ್ತಿದೆ. ಇದನ್ನು ಅರ್ಥಮಾಡಿಕೊಳ್ಳುತ್ತೀರ ಅಂತ ತಿಳಿದುಕೊಂಡಿದ್ದೇನೆ.

ಶ್ರೀ ಎ.ಎಸ್.ಗುರುಸ್ವಾಮಿ(ಚಾಮುಂಡೇಶ್ವರಿ): ಅಧ್ಯಕ್ಷರೇ, ಕೆ.ಆರ್.ಎಸ್. ಸಮಸ್ಯೆ ನನ್ನ ಚಾಮುಂಡೇಶ್ವರಿ ಮತಕ್ಷೇತ್ರಕ್ಕೂ ಬರುತ್ತದೆ. ಸಚಿವರನ್ನು ಒಂದು ಮಾಹಿತಿ ಕೇಳುತ್ತೇನೆ. ಒರಿಜಿನಲ್ ಕೆ.ಆರ್.ಎಸ್. ಡ್ಯಾಂ ಕಟ್ಟದಾಗ ಇಷ್ಟೆ ಅಡಿ ನೀರು ಕಾಪಾಡಿಕೊಳ್ಳಬೇಕು ಎಂದು ಆ ಸ್ಕೀಂನಲ್ಲಿದೆ, ಅದನ್ನು ಕಾಪಾಡುತ್ತಿದ್ದಾರೆಯೇ? ಹಾಗೂ ಆ ರೀತಿ ಕಾಪಾಡಿಕೊಳ್ಳಲು ಸರ್ಕಾರ ಕೈಗೊಂಡಿರುವ ರಕ್ಷಣಾ ಕ್ರಮಗಳೇನು?

ಶ್ರೀ ಬಿ.ಬಿ.ಚಿಮ್ಮನಕಟ್ಟಿ: ಅಧ್ಯಕ್ಷರೇ ಇಷ್ಟೇ ಪ್ರಮಾಣದ ನೀರು ನಿಲ್ಲಿಸಬೇಕೆಂದಿರುವುದನ್ನು ಈಗಲೂ ನಾವು ಅದೇ ಪ್ರಕಾರ ರಕ್ಷಣೆ ಮಾಡುತ್ತಿದ್ದೇವೆ.

ಕಾವೇರಿ ನದಿಯಿಂದ ಪಿರಿಯಾಪಟ್ಟಣಕ್ಕೆ ಕುಡಿಯುವ ನೀರು ಸರಬರಾಜು ಮಾಡುವ ವಿಚಾರ.

182(2009)

ಶ್ರೀ ಹೆಚ್.ಸಿ.ಬಸವರಾಜು(ಪಿರಿಯಾಪಟ್ಟಣ): ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಪಿರಿಯಾ ಪಟ್ಟಣಕ್ಕೆ ಕಾವೇರಿಯಿಂದ ಕುಡಿಯುವ ನೀರಿನ ಯೋಜನೆ ಮಂಜೂರು ಆಗಿದೆಯೇ?

2. ಹಾಗಿದ್ದಲ್ಲಿ ಯಾವಾಗ ಪೂರ್ಣಗೊಳಿಸಲಾಗುವುದು. ಇದಕ್ಕೆ ತಗಲುವ ವೆಚ್ಚ ಎಷ್ಟು?

3. ಹಾಲಿ ಎಷ್ಟು ಅನುದಾನ ಬಿಡುಗಡೆಯಾಗಿದೆ (ಸಂಪೂರ್ಣ ವಿವರ ನೀಡುವುದು)

ಶ್ರೀ ಎಸ್.ಎಂ.ಕೃಷ್ಣ(ಮುಖ್ಯ ಮಂತ್ರಿಯವರು):

1. ಮಂಜೂರಾಗಿದೆ.

2. ಈ ಯೋಜನೆಯನ್ನು ಡಿಸೆಂಬರ್ 2001ರೊಳಗೆ ಪೂರ್ಣಗೊಳಿಸಲು

ಉದ್ದೇಶಿಸಲಾಗಿತ್ತು. ಆದರೆ ಗಿರಿಗೂರು ಬಳಿ ಮೂಲ ಸ್ಥಾವರ ಮತ್ತು ಕುಂದನಹಳ್ಳಿ ಬಳಿ ನೀರು ಜಲ ಶುದ್ಧೀಕರಣಾಗಾರಕ್ಕೆ ಜಮೀನು ಸ್ವಾಧೀನ ಪ್ರಕ್ರಿಯೆ ಮುಗಿದಿದ್ದು, ಜಮೀನು ಕಳೆದು ಕೊಂಡವರು ಪರಿಹಾರ ನೀಡಿದ ನಂತರವೇ ಕಾಮಗಾರಿ ಕೈಗೊಳ್ಳಬೇಕೆಂದು ತಡೆ ಒಡ್ಡಿರುವುದರಿಂದ ಜಲ ಶುದ್ಧೀಕರಣಾಗಾರ ಕಾಮಗಾರಿ ಕೈಗತ್ತಿಕೊಳ್ಳಲು ಸಾಧ್ಯವಾಗಿಲ್ಲ. ಉಳಿದೆಲ್ಲ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. ಈ ಯೋಜನೆಗೆ ತಗಲುವ ವೆಚ್ಚ 480.00 ಲಕ್ಷಗಳು. ಈ ಯೋಜನೆಯನ್ನು ಮಾರ್ಚ್ 2002ರಲ್ಲಿ ಚಾಲನೆಗೊಳಿಸಲು ಉದ್ದೇಶಿಸಲಾಗಿದೆ.

3. ಈ ಯೋಜನೆಗೆ ಕೇಂದ್ರ ಸರ್ಕಾರದಿಂದ ರೂ.116.88 ಲಕ್ಷಗಳು ಮತ್ತು ರಾಜ್ಯ ಸರ್ಕಾರದಿಂದ ರೂ.218.60 ಲಕ್ಷಗಳು ಒಟ್ಟು ರೂ.335.48 ಲಕ್ಷಗಳು ಬಿಡುಗಡೆಯಾಗಿರುತ್ತದೆ. ಈ ಯೋಜನೆಗೆ ಇಲ್ಲಿಯವರೆಗೆ ರೂ.288.37 ಲಕ್ಷಗಳು ಖರ್ಚಾಗಿರುತ್ತದೆ.

ಶ್ರೀ ಎಚ್.ಸಿ.ಬಸವರಾಜು: ಅಧ್ಯಕ್ಷರೇ, ಪಿರಿಯಾಪಟ್ಟಣ ಬಹಳ ಹಿಂದುಳಿದ ಪ್ರದೇಶದಲ್ಲಿದೆ, ಅಲ್ಲಿ ಕುಡಿಯುವ ನೀರಿನ ಸಮಸ್ಯೆ ಬಹಳ ತೀವ್ರವಾಗಿದೆ, ಅದು ಸರ್ಕಾರದ ಗಮನಕ್ಕೂ ಬಂದಿದೆ. ಹಾಗಾದಲ್ಲಿ ಈ ಕುಡಿಯುವ ನೀರಿನ ಯೋಜನೆ ಪ್ರಾರಂಭಿಸಿದ್ದು ಯಾವಾಗ? ಇದನ್ನು ನಿಗದಿತ ಅವಧಿಯಲ್ಲಿ ಮುಗಿಸದಿರಲು ಉಂಟಾದ ಅನಿವಾರ್ಯ ಕಾರಣ ತೋರಿಸಿರುವುದು ಸರಿಯಲ್ಲ. ಹಣದ ಕೊರತೆ ಜೊತೆಗೆ ಈ ಯೋಜನೆ ವಿಳಂಬವಾಗಲು ಕಾರಣವೇನು? ಜಮೀನು ಕಳೆದುಕೊಂಡ ರೈತರಿಗೆ ಪರಿಹಾರವನ್ನು ನೀಡಲು ಆಗದೇ ವಿಳಂಬವಾಗಿದೆ ಎನ್ನುವ ಉತ್ತರವನ್ನು ಕೊಟ್ಟಿದ್ದೀರಿ. ಆದರೆ ಹಣದ ಕೊರತೆ ಇಲ್ಲದೇ ಇದ್ದಾಗ ಈ ರೀತಿಯಾದ ಅನಗತ್ಯ ವಿಳಂಬಕ್ಕೆ ಈ ಸರ್ಕಾರ ಹೊಣೆಯಾಗಿದೆ. ಈ ರೀತಿ ಮಂದಗತಿಯ ಧೋರಣೆಗೆ ಕಾರಣವೇನು? ಈ ಯೋಜನೆಗೆ ಬೇಕಾದ ಯಂತ್ರೋಪಕರಣಗಳು ಮತ್ತು ವಿದ್ಯುಚ್ಛಕ್ತಿ ಸರಬರಾಜು ಆಗಿದೆಯೇ? ಈ ಪ್ರಶ್ನೆಗಳಿಗೆ ಕೂಲಂಕಷವಾದ ವಿವರವನ್ನು ಮಾನ್ಯ ಸಚಿವರು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಬಿ.ಚಿಮ್ಮನಕಟ್ಟಿ: ಮಾನ್ಯ ಅಧ್ಯಕ್ಷರೇ, ಈ ಯೋಜನೆ 1998ರಲ್ಲಿ ಮಂಜೂರಾಗಿದೆ. ಆಗ ಸುಮಾರು 4 ಕೋಟಿ 80 ಲಕ್ಷ ಅಂದಾಜು ಮೇಲೆ ಈ ಯೋಜನೆ ಮಂಜೂರಾತಿಯಾಗಿತ್ತು. ಈಗ ಮಾನ್ಯ ಸದಸ್ಯರು ಹೇಳಿರುವ ರೀತಿಯಲ್ಲಿ ಈಗಾಗಲೇ ನಿಗದಿತ ಅವಧಿ ಮುಗಿದಿದೆ. ಆದರೆ ಕೆಲವು ಭೂ ಮಾಲೀಕರ ತೊಂದರೆಯಿಂದ ಇದನ್ನು ಆದಷ್ಟು ಬೇಗ ಮುಗಿಸುವುದಕ್ಕಾಗಲಿಲ್ಲ. ಆದರೂ ಕೂಡ ಭೂಮಾಲೀಕರಿಗೆ ಪರಿಹಾರವನ್ನು ಕೊಡುವ ಕೆಲಸವನ್ನು ಈಗಾಗಲೇ ಮಾಡಿದ್ದೇವೆ. ಈಗಾಗಲೇ ಅವರಿಗೆ ಸುಮಾರು ಒಂದು ಲಕ್ಷದ ಐವತ್ತು ಸಾವಿರ ರೂಪಾಯಿಗಳನ್ನು

ಮಂಡಳಿಯಿಂದ ಉಪವಿಭಾಗಾಧಿಕಾರಿಗಳಿಗೆ ಹಣವನ್ನೂ ಕೂಡ ಬಿಡುಗಡೆ ಮಾಡಿದ್ದೇವೆ. ಇನ್ನುಳಿದ ಕೆಲಸ ಕಾಮಗಾರಿಗಳು ಹೆಡ್ ವರ್ಕ್ ಮತ್ತೆ ಕೆಲವು ಪೈಪ್‌ಲೈನ್ ವರ್ಕ್ ಕಾಮಗಾರಿಗಳು ಮುಗಿದಿದೆ. ಈಗ ಇದಕ್ಕೆ 2 ಕೋಟಿ 88 ಲಕ್ಷ ರೂಪಾಯಿಗಳ ಅಂದಾಜು ಮಾಡಿದ್ದು, ಅದರ ಮೇಲೆ ಖರ್ಚಾಗಿದೆ. ಇನ್ನು ಉಳಿದ ಕೆಲಸವೇನು ಇದೆ, ಅದನ್ನು ಆದಷ್ಟು ಬೇಗ ಮುಗಿಸಿ ಇನ್ನು ಆರು ತಿಂಗಳೊಳಗಾಗಿ ಈ ಕಾಮಗಾರಿಯನ್ನು ಪೂರ್ತಿ ಮುಗಿಸಿ ಯೋಜನೆಯನ್ನು ಕಾರ್ಯಗತಗೊಳಿಸುತ್ತೇವೆ.

ಶ್ರೀ ಹೆಚ್.ಸಿ.ಬಸವರಾಜು: ಮಾನ್ಯ ಅಧ್ಯಕ್ಷರೇ, ಪಿರಿಯಾಪಟ್ಟಣ ಟೌನ್‌ನಲ್ಲಿರುವ ಈಗ ಹಾಲಿ ಪೈಪ್‌ಲೈನ್‌ಗಳು ಏನು ಇದ್ದಾವೆ, ಹಳೆಯ ಪೈಪ್‌ಲೈನ್‌ಗಳಿಗೆ ಈ ಯೋಜನೆಯಿಂದ ನೀರನ್ನು ಒದಗಿಸುವ ಒಂದು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಆದರೆ ಇದು ಒರಿಜಿನಲ್ ಪ್ಲಾನ್ ಪ್ರಕಾರ ಹೊಸ ಪೈಪ್‌ಲೈನ್‌ಗಳು, ಹೊಸ ವ್ಯವಸ್ಥೆಯನ್ನು ಮಾಡಬೇಕಾಗಿರುವುದನ್ನು ಬಿಟ್ಟಿರುವುದಕ್ಕೆ ಕಾರಣವನ್ನು ತಿಳಿಸಬೇಕು. ಮತ್ತು ಎರಡನೆಯದಾಗಿ ಇಲ್ಲಿ ಕಳಪೆ ಕಾಮಗಾರಿ ಪೈಪ್‌ಲೈನ್‌ಗಳನ್ನು ಅಳವಡಿಸುವುದಕ್ಕೆ ಕಳಪೆ ಕಾಮಗಾರಿಗಳು ಆಗತಕ್ಕದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ? ಸರ್ಕಾರ ಇನ್ನೂ ಆರು ತಿಂಗಳು ಟೈಮ್ ಬೇಕೆಂದು ಕೇಳುತ್ತಿದ್ದೀರಿ. ಆದರೆ ಹಣದ ಕೊರತೆ ಇಲ್ಲದೇ ಇದ್ದಾಗಲೂ ಕೂಡ ಅಲ್ಲಿಯ ಜಮೀನುದಾರರು ಜಮೀನು ಕೊಡಲಿಕ್ಕೆ ಮುಂದೆ ಬಂದಿದ್ದರೂ ಕೂಡ ಅಧಿಕಾರಿಗಳ ಬೇಜವಾಬ್ದಾರಿಯಿಂದ ಈ ರೀತಿ ಅನಗತ್ಯ ವಿಳಂಬವಾಗಿರುವುದಕ್ಕೆ ಸರ್ಕಾರವೇ ಹೊಣೆಯಾಗಿರತಕ್ಕದ್ದು. ಕೂಡಲೇ ಇವರುಗಳ ಬಗ್ಗೆ ತಕ್ಷಣ ಶಿಸ್ತಿನ ಕ್ರಮ ತೆಗೆದುಕೊಂಡು ಇನ್ನು ಮೂರು ತಿಂಗಳಲ್ಲಿ ನೀರನ್ನು ಕೊಡುವುದಕ್ಕೆ ಸರ್ಕಾರ ಗಮನವನ್ನು ಹರಿಸಬೇಕೆಂದು ಹೇಳುತ್ತೇನೆ.

ಶ್ರೀ ಬಿ.ಬಿ.ಚಿಮ್ಮನಕಟ್ಟಿ: ಮಾನ್ಯ ಅಧ್ಯಕ್ಷರೇ, ಈ ಯೋಜನೆಗೆ ಹಣದ ತೊಂದರೆ ಬರಲಾರದ ರೀತಿಯಲ್ಲಿ ನಾನು ನೋಡಿಕೊಳ್ಳುತ್ತೇನೆ. ಆದಷ್ಟು ಬೇಗ ಆರು ತಿಂಗಳೊಳಗೆ ಈ ಕಾಮಗಾರಿಯನ್ನು ಮುಗಿಸುವುದಕ್ಕೆ ಸರ್ಕಾರ ಬಹಳ ತೀವ್ರಗತಿಯಿಂದ ಕೆಲಸ ಮಾಡುತ್ತಿದೆ. ಅದರ ಜೊತೆಗೆ ಏನಾದರೂ ಅವ್ಯವಹಾರ ನಡೆದಿರತಕ್ಕದ್ದು ಏನಿದೆ ಅದರ ಬಗ್ಗೆ ತಾವು ತಿಳಿಸುವುದಾದರೆ ಅದನ್ನೂ ಕೂಡ ತನಿಖೆ ಮಾಡಿಸುತ್ತೇನೆ.

ಅಧ್ಯಕ್ಷರು: ಪ್ರಶ್ನೋತ್ತರ ಇಲ್ಲಿಗೆ ಮುಗಿಯಿತು.